


## ಜಾತ್ರೆ ಜನರ ಧ್ವನಿಯೂ ಹೌದು

ಜಾತ್ರೆಗಳು ಕೇವಲ ಧಾರ್ಮಿಕ ಆಚರಣೆಗಳಷ್ಟೇ ಅಲ್ಲ, ಅವುಗಳು ವರ್ತಮಾನದ, ಸಮಕಾಲೀನ ವಿದ್ಯಮಾನಗಳ ಪ್ರತಿಕ್ರಿಯೆಯೂ ಆಗಿವೆ. ಲಕ್ಷಾಂತರ ಜನ ಸೇರುವ ಪ್ರಸಿದ್ಧ ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಜಾತ್ರೆಯು ಜನರ ಮನಸ್ಸಿನ ಧ್ವನಿಯೂ ಆಗಿದೆ. ಉತ್ತರ ಕರ್ನಾಟಕದ ಜಾತ್ರೆಗಳೆಂದರೆ ಮಂಡಾಳು (ಚುರುಮುರಿ), ಖಾರಾ, ಮಿರ್ಚಿ, ಬೆಂಡು, ಬೆತ್ತಾಸು ಮೊದಲಾದ ಸಿಹಿ ಖಾದ್ಯಗಳ ವ್ಯಾಪಾರ ಜೋರಾಗಿರುತ್ತದೆ. ಕೊಪ್ಪಳದ ಜಾತ್ರೆಯ ಮಿಠಾಯಿ ಅಂಗಡಿಗಳ ವ್ಯಾಪಾರದ ಜೊತೆಗೆ ಜನರ ಧ್ವನಿಯಾಗಿ 'ಎಂಎಸ್‌ಪಿಎಲ್ ವಿಸ್ತರಣೆ ನಿಲ್ಲಿಸಿ' ಧ್ಯೇಯವಾಕ್ಯವನ್ನೂ ಸಾರುತ್ತವೆ. ಜಿಲ್ಲಾ ಕೇಂದ್ರ ಕೊಪ್ಪಳದ ಬಳಿ ಸಾವಿರಾರು ಎಕರೆ ಪ್ರದೇಶದಲ್ಲಿ ಖಾಸಗಿ ಗಣಿ ಉದ್ಯಮವೊಂದು ಬೃಹತ್ ಕಾರ್ಖಾನೆ ಸ್ಥಾಪನೆಗೆ ಮುಂದಾಗಿರುವುದು, ಸ್ಥಳೀಯ ಪರಿಸರದ ಮೇಲೆ ಉಂಟು ಮಾಡಲಿರುವ ದುಷ್ಪರಿಣಾಮದ ಅರಿತು ಕೊಪ್ಪಳದ ಹೋರಾಟಗಾರರು ಸುಮಾರು 70 ದಿನಗಳಿಂದ ಸರದಿಯಾಗಿ ಅನಿರ್ದಿಷ್ಟ ಧರಣಿ ನಡೆಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಕೊಪ್ಪಳದ ಜಾತ್ರೆಯೂ ಧ್ವನಿಯಾಗಿರುವುದು ವಿಶೇಷ.

–ನಾಗರಾಜನಾಯಕ ಡಿ. ಡೊಳ್ಳಿನ, ಕೊಪ್ಪಳ



## ಅಪರೂಪದ 'ನಿಲು' ಕಂಡೀರಾ?

ಹಿಂದಿನ ಕಾಲದಲ್ಲಿ ಹಾಲು ಮತ್ತು ಮೊಸರು ಮಣ್ಣಿನ ಮಡಿಕೆಯಲ್ಲಿ ಸುರಕ್ಷಿತವಾಗಿರುತ್ತಿತ್ತು. ಬೆಕ್ಕಿನ ಕೈಗೆ ಸಿಗದಂತೆ ಜೋಪಾನವಾಗಿಡಲು ಕತ್ತಾಳೆ ಹಗ್ಗದಿಂದ ಹೊಸೆದ 'ನಿಲು' ಅಥವಾ ದಕ್ಷಿಣ ಕನ್ನಡ ಜಿಲ್ಲೆಯ ಭಾಗದಲ್ಲಿ 'ಸಿಕ್ಕ' ಎನ್ನುವ ಸಾಧನ ಬಳಕೆಯಾಗುತ್ತಿತ್ತು. ಎತ್ತರದಿಂದ ತೂಗಾಡುವ 'ನಿಲು'ವಿನಲ್ಲೇ ಮಡಿಕೆಗಳನ್ನು ಇಡುತ್ತಿದ್ದರು. ಈಗ ಮಣ್ಣಿನ ಮಡಿಕೆ, ಸಿಕ್ಕ, ಎರಡರ ಬಳಕೆಯೂ ಅಗೋಚರವಾಗಿದೆ. ಆದರೆ ಬಂಟ್ವಾಳದ ಮಂಚಿಯ ನೂಜಿಬೈಲು ನಾರಾಯಣ ಭಟ್ಟರ ಮನೆಯಲ್ಲಿ ಇಂದಿಗೂ ಇದೆರಡರ ಉಪಯೋಗವೂ ಕಂಡುಬರುತ್ತಿದೆ.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ

## ಮಲೆ ಮಹದೇಶ್ವರದಲ್ಲಿ ನಾಣ್ಯದ ಬಸವ

ಚಿತ್ರದಲ್ಲಿ ಕಾಣುತ್ತಿರುವ ನಾಣ್ಯದ ಬಸವಣ್ಣ ಇರುವುದು ಪ್ರಸಿದ್ಧ ಯಾತ್ರಾಸ್ಥಳವಾದ ಮಲೆ ಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ. ಇದನ್ನು 'ಅಲಂಬಾಡಿ ಬಸವಣ್ಣ' ಎನ್ನುತ್ತಾರೆ. ಭಕ್ತಾದಿಗಳು ಇಲ್ಲಿರುವ ಬಸವಣ್ಣನಿಗೆ ಹರಕೆ ಮಾಡಿಕೊಂಡು ನಾಣ್ಯವನ್ನು ಬಸವನ ಮೈಮೇಲೆ ಇಡುತ್ತಾರೆ. ಅವರು ಹೊತ್ತ ಹರಕೆ ಕೈಗೊಡುವುದಾದರೆ ನಾಣ್ಯ ಬಸವನ ಮೈಮೇಲೆ ನಿಲ್ಲುತ್ತದೆ. ಹರಕೆ ಈಡೇರುವುದಿಲ್ಲ ಎಂದಾದರೆ ನಾಣ್ಯ ಕೆಳಗೆ ಬೀಳುತ್ತದೆ. ಬಸವನಿಗೆ ಪೂಜೆ ಮಾಡುವವರ ಪ್ರಕಾರ ತುಂಬಾ ವರ್ಷಗಳಿಂದ ಈ ಪದ್ಧತಿ ನಡೆದುಕೊಂಡು ಬರುತ್ತಿದೆ. ನಾಣ್ಯ ಬಸವನ ಮೇಲೆ ನಿಂತರೆ ನಾವು ಅಂದುಕೊಂಡ ಕೆಲಸ ಆಗುತ್ತದೆ ಎನ್ನುವುದು ಇಲ್ಲಿನ ನಂಬಿಕೆ.

–ಶಶಿರೇಖಾ ನಾಗೇಂದ್ರ, ತುಮಕೂರು

